ವಿಶ್ವವಾಣಿ

ಸಂಪಾದಕೀಯ

ಜಲ ಜೀವನ್ ಯೋಜನೆ ಪರಿಣಾಮಕಾರಿಯಾಗಲಿ

ಭವಿಷ್ಯದಲ್ಲಿ ನೀರಿಗಾಗಿ ಯುದ್ಧಗಳು ನಡೆಯುತ್ತವೆ ಎಂಬ ಮಾತುಗಳು ಕೇಳಿಬಂದಿದೆ. ನಮಗೆ ಜಲ ವಿವಾದಗಳು ಹೊಸದಲ್ಲ. ಮಹದಾಯಿ, ಕೃಷ್ಣೆ, ಕಾವೇರಿ ಜಲವಿವಾದಗಳನ್ನು ಕಂಡಿದ್ದೇವೆ. ಅಂತೆಯೇ ಜಗತ್ತಿನಾದ್ಯಂತ ಬಹುತೇಕ ರಾಷ್ಟ್ರಗಳ ನಡುವಣ ಜಲವಿವಾದಗಳು ಜೀವಂತವಾಗಿವೆ. ಇದರಿಂದ ಜಲದ ಮಹತ್ವವನ್ನು ತಿಳಿಯಬಹುದು. ಜಲದ ರಕ್ಷಣೆಯಂತೆಯೇ ಜಲಮೂಲಗಳ ರಕ್ಷಣೆಯೂ ಮಹತ್ವವಾದದ್ದು. ಸರಕಾರಗಳು



ಸಹ ತಾವು ರೂಪಿಸುವ ನೀರಿನ ಯೋಜನೆಗಳ ಜಾರಿ ಹಾಗೂ ಸಮರ್ಪಕ ನಿರ್ವಹಣೆ ಬಗ್ಗೆ ಗಮನಹರಿಸಬೇಕಿರುವುದು ಇಂದಿನ ಬಹುಮುಖ್ಯ ಅವಶ್ಯಕತೆ. ಇದೀಗ ಕೇಂದ್ರ ಸರಕಾರದ ಜಲ ಜೀವನ್ ಮಿಷನ್ ಯೋಜನೆಯಡಿ ಜಲಮೂಲ ಲಭ್ಯವಿರುವ ಗ್ರಾಮಗಳಲ್ಲಿ ನಲ್ಲಿಗಳ ಮೂಲಕ ನೀರೊದಗಿಸಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಈ ಯೋಜನೆ ಮೂಲಕ 15ಲಕ್ಷ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವುದು ರಾಜ್ಯ ಸರಕಾರದ ಉದ್ದೇಶ. ರಾಜ್ಯದಲ್ಲಿ ಈ ಯೋಜನೆ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರೊಂದಿಗೆ ಚರ್ಚೆ ನಡೆಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರದ ತಲಾ ಶೇ.50ರ ಅನುದಾನದೊಂದಿಗೆ ಯೋಜನೆ ಜಾರಿಗೆ ನಿರ್ಧರಿಸಲಾಗಿದೆ. ರಾಜ್ಯಕ್ಕೆ 1150ಕೋಟಿ ಅನುದಾನ ಮಂಜೂರಾಗಿದೆ. 2022-23ರ ಅವಧಿಯೊಳಗೆ ರಾಜ್ಯಾದ್ಯಂತ ಈ ಯೋಜನೆಯನ್ನು ಜಾರಿಗೊಳಿಸುವಂತೆ ಕೇಂದ್ರ ಸರಕಾರ ಸೂಚಿಸಿದೆ. ಒಟ್ಟು 15 ಲಕ್ಷ ಕುಟುಂಬಗಳಿಗೆ ನೀರಿನ ಪೂರೈಕೆ ಮಾಡುವ ಮಹತ್ವದ ಈ ಯೋಜನೆ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಿದರೆ ನೀರಿನ ಪೂರೈಕೆಯಲ್ಲಿನ ಬಹಳಷ್ಟು ಪ್ರಮಾಣದ ಸಮಸ್ಯೆ ಬಗೆಹರಿಯಲಿದೆ. ಅದೇರೀತಿ ಜಲ ಮೂಲಗಳ ರಕ್ಷಣೆ, ಅವುಗಳ ನಿರ್ವಹಣೆಗೂ ಆದ್ಯತೆ ಹೆಚ್ಚಾಗಬೇಕು. ಜಲ ಮೂಲಗಳ ನಿರ್ವಹಣೆ ವಿಷಯದಲ್ಲಿ ಸರಕಾರದ ಜತೆಗೆ ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯ.

ಸೊಂಪಾದಕೀಯ

ಅದೆಂಥ ದರ್ಶನ ಸ್ವಾಮಿ?

ಲಾಕ್‌ಡೌನ್ ಕಾರಣದಿಂದ ರಾಜ್ಯ ಹಾಗೂ ದೇಶಗಳ ದೇವರುಗಳೂ ಬಡವರಾಗಿದ್ದಾರೆ. ಏಕೆಂದರೆ ಎಲ್ಲ ದೇವಾಲಯಗಳು ಬಂದ್ ಆಗಿವೆ. ಭಕ್ತರಿಲ್ಲದೆ ಆದಾಯವೂ ಇಲ್ಲವಾಗಿದೆ. ದೇವಸ್ಥಾನದ ಪೂಜಾರಿಗಳಿಗೆ, ಇತರ ಸಿಬ್ಬಂದಿಗೆ ಸಂಬಳ ಇಲ್ಲದ ಪರಿಸ್ಥಿತಿಯೂ ಅನೇಕ ಕಡೆ ಇದೆ. ದೇಗುಲಗಳಲ್ಲಿ ಸಿಗುವ ತಟ್ಟೆಕಾಸು ಅರ್ಚಕರ ಹೊಟ್ಟೆ ತುಂಬಿಸುತ್ತಿತ್ತು. ಈಗ ಅದೂ ಇಲ್ಲವಾಗಿದೆ. ಈ ನಡುವೆ ರಾಜ್ಯ ಸರಕಾರ ಪ್ರಮುಖ ದೇವಾಲಯಗಳಲ್ಲಿ ಆನ್‌ಲೈನ್ ಪೂಜಾ ಸೇವೆಗಳನ್ನು ಆರಂಭಿಸಲಿದೆಯಂತೆ. ಆನ್‌ಲೈನ್ ಮೂಲಕ ಹಣ ಪಾವತಿ ಮಾಡಬೇಕು. ದರ್ಶನ, ಸೇವೆಯೂ ಆನ್‌ಲೈನ್ ಮೂಲಕವೇ. ಕೊನೆಗೆ ಮನೆಗೆ ಪ್ರಸಾದವನ್ನೂ ಪೋಸ್ಟ್ ಮೂಲಕ ಕಳಿಸುತ್ತಾರಂತೆ. ಇಷ್ಟೆಲ್ಲ ಆದಮೇಲೆ ನಮಸ್ಕಾರ, ಆಶೀರ್ವಾದವೂ ಆನ್‌ಲೈನ್ ಮೂಲಕವೇ ಆಗಬೇಕು ತಾನೆ. ಇದ್ಯಾಕೋ ಸೆಟ್ ಆಗಲ್ಲ ಬಿಡಿ ಅನ್ನೋದು ಸದ್ಭಕ್ತರ ಅನಿಸಿಕೆ. ಲೈವ್ ದರ್ಶನಕ್ಕೆ ವರ್ಚುವಲ್ ದರ್ಶನ ಸರಿಸಾಟಿ ಆಗದು. ಮೈಲುದ್ದದ ಕ್ಯೂನಲ್ಲಿ ನಿಲ್ಲದೆ, ತಳ್ಳಾಟ- ನೂಕಾಟವಿಲ್ಲದೆ ದೇವರ ದರ್ಶನ ಅಂದರೆ ಅದೆಂಥ ದರ್ಶನ ಸ್ವಾಮಿ? ಸಂಕಲ್ಪವೂ ಇಲ್ಲ, ಸಂಘರ್ಷವೂ ಇಲ್ಲ. 'ಸ್ವಲ್ಪ ನಿಮ್ಮ ತಲೆ ತೆಗೀರಿ ಇತ್ಲಾಗೆ' ಅಂತ ಹೇಳೋರಿಲ್ಲ. ಕ್ಯೂನಲ್ಲಿ ಬನ್ನಿ, ಬೇಗ ಬೇಗ ನಡೀರಿ ಎಂದು ಆವಾಜ್ ಹಾಕುವ ಲೈನ್‌ಮನ್‌ಗಳಿಲ್ಲ. ವಿಐಪಿಗಳಿಗಂತೂ ಭಾರಿ ಬೇಸರದ ಸಂಗತಿ. ದೇವಸ್ಥಾನಕ್ಕೆ ಹೋದರೆ ಅವರಿಗೆ ಪೂರ್ಣಕುಂಭ ಸ್ವಾಗತ. ವಿಶೇಷ ಮರ್ಯಾದೆ. ಹಾಗೆಯೇ ಹಣ ಇರುವವರಿಗೆ, ದೊಡ್ಡ ದೊಡ್ಡ ಮಂದಿಗೆ ಹಣಕೊಟ್ಟು ವಿಶೇಷ ದರ್ಶನ, ಸೇವೆ ಮಾಡಿಸುವ ಚಾನ್ಸ್ ಇಲ್ಲ. ಅಥವಾ ಇಲ್ಲೂ ವಿಐಪಿ ದರ್ಶನ, ವಿಶೇಷ ಪೂಜೆ, ಸೇವೆ ಅಂತ ಬೇರೆ ಕೆಟಗರಿ ಏನಾದರೂ ಇದೆಯೇ ಎಂಬುದನ್ನು ನಮ್ಮ ಪೂಜಾರಿಗಳು ಅಂದರೆ ಮುಜರಾಯಿ ಮಂತ್ರಿಗಳು ತಿಳಿಸಿಲ್ಲ. ಇದರ ಬದಲು ಅರ್ಚಕರಿಗೆ ವೇತನವನ್ನಾದರೂ ಕೊಟ್ಟಿದ್ದರೆ ಆ ಪರಮಾತ್ಮ ಮೆಚ್ಚುತ್ತಿದ್ದನೇನೊ. ಅಂತೂ ಈ ಆನ್‌ಲೈನ್ ಸೇವೆ ಮುಗಿದು ಲೈವ್ ದರ್ಶನ ಯಾವಾಗ ಶುರುವಾಗುತ್ತೋ ಏನೋ ಕಾದುನೋಡಬೇಕು. ಆ ದೇವರೇ ಮನಸ್ಸು ಮಾಡಬೇಕು. ಆ ಕರೋನಾಕರನನ್ನು ನಿರ್ನಾಮ ಮಾಡುವ ಕರುಣಾಕರ ಇನ್ನಾದರೂ ಹುಟ್ಟಬಾರದೇ? ಹಾಗಾದಲ್ಲಿ ಭಕ್ತರು ದೇವರ ದರ್ಶನಕ್ಕೆ ಓಡೋಡಿ ಬರುತ್ತಾರೆ.

ಸಂಪಾದಕರ ಸದ್ಯಶೋಧನೆ

ನಮಗೆ ದೊಡ್ಡ ಪಾಠ

ಅಮೆರಿಕ ಇಂಥದ್ದೊಂದು ಮಾರಣಹೋಮವನ್ನು ನಿರೀಕ್ಷಿಸಿರಲಿಲ್ಲ. ಸಾವಿನ ಪ್ರಮಾಣ ಹೆಚ್ಚುತ್ತಲೇ ಸಾಗಿದೆ. ಈ ಸಾವುಗಳ ಪ್ರಮಾಣ ಎಲ್ಲಿಗೆ ಹೋಗಿ ತಲುಪುತ್ತದೆ ಎಂಬ ಬಗ್ಗೆ ಯಾರಿಗೂ ಕಲ್ಪನೆ ಇಲ್ಲ. ಒಂದು ಸಾವು - ನೋವು ಸಂಭವಿಸಿದರೂ ಅಮೆರಿಕ ಪತ್ರಿಕೆಗಳಲ್ಲಿ ಅದು ಮುಖಪುಟದ ಲೀಡ್ ಸುದ್ದಿ ಆಗುತ್ತದೆ. ಕಾರಣ ಅಲ್ಲಿ ನಮ್ಮ ದೇಶದಂತೆ ವಿಚಿತ್ರ ಕಾರಣಗಳಿಗೆ (ವಿದ್ಯುತ್ ತಂತಿ ತಗಲಿ ಸಾವು, ಕಾಲು ಜಾರಿ ಚರಂಡಿಗೆ ಬಿದ್ದು ಸಾವು, ಮರ ಬಿದ್ದು ಸಾವು, ಗೂಳಿ ತಿವಿದು ಸಾವು, ಹಾವು ಕಚ್ಚಿ ಬಹಿರ್ದೆಸೆಗೆ ಹೋಗಿದ್ದ ಮಹಿಳೆ ಸಾವು, ಹಲ್ಲಿ ಬಿದ್ದ ವಿಷ ಆಹಾರ ಸೇವಿಸಿ ಸಾವು...) ಜನ ಸಾಯುವುದಿಲ್ಲ, ಹೀಗಾಗಿ ಸಾವು-ನೋವಿನ ಸುದ್ದಿ ಮುಖಪುಟದಲ್ಲಿ ರಾರಾಜಿಸುವುದು ಕಡಿಮೆ.

ಆದರೆ ಕಳೆದ ಎರಡು ತಿಂಗಳಿನಿಂದ ಪ್ರತಿದಿನ ಸರಾಸರಿ ಸಾವಿರ ಜನ ಅಲ್ಲಿ ಸಾಯುತ್ತಿದ್ದಾರೆ. ಅದರ ಹತ್ತುಪಟ್ಟು ಮಂದಿಗೆ ಕರೋನಾವೈರಸ್ ಸೋಂಕು ತಗುಲುತ್ತಿದೆ. ಆದರೆ ಅಮೆರಿಕದ ಪತ್ರಿಕೆಗಳು ಅತ್ಯಂತ ಸಂಯಮದಿಂದ ವರದಿ ಮಾಡುತ್ತಿವೆ. ಯಾವ ಪತ್ರಿಕೆಯೂ ಸಾವಿನ ಸಂಖ್ಯೆಯನ್ನು ದಪ್ಪಕ್ಷರಗಳಲ್ಲಿ ವರದಿ ಮಾಡುತ್ತಿಲ್ಲ. ಒಂದೇ ದಿನ ಸಾವಿರ ಜನ ಸತ್ತಾಗಲೂ ಆ ಸುದ್ದಿಯನ್ನು ಸಿಂಗಲ್ ಕಾಲಂ ಸುದ್ದಿಯಾಗಿ ಮಾಡಿದ್ದು, ಆ ಪತ್ರಿಕೆಗಳ ಸೂಕ್ಷ್ಮ ಸಂವೇದನೆಗೆ ಉತ್ತಮ ನಿದರ್ಶನ.

ವಾಲ್ ಸ್ಟ್ರೀಟ್ ಜರ್ನಲ್ ಪತ್ರಿಕೆಯಂತೂ ಸಾವಿನ ಸುದ್ದಿಯನ್ನು ಮುಖಪುಟದಲ್ಲಿ ಗ್ರಾಫ್ ಮೂಲಕ ತೋರಿಸಿ, ಉಳಿದ ವಿವರಗಳನ್ನು ಒಳಪುಟಗಳಲ್ಲಿ ವರದಿ ಮಾಡಿದ್ದು ಎದ್ದು ಕಾಣುವಂತಿತ್ತು. ಆ ಲೆಕ್ಕದಲ್ಲಿ ನಾವೇ, ಐದು -ಹತ್ತು ಜನರ ಸಾವನ್ನೂ ಮುಖಪುಟದಲ್ಲಿ ದಪ್ಪಕ್ಷರಗಳಲ್ಲಿ ವರದಿ ಮಾಡುತ್ತಿದ್ದೇವೆ. ನಾಳೆಯಿಂದ ನಾವು ಏಕಾಏಕಿ ಅಮೆರಿಕದ ಪತ್ರಿಕೆಗಳಂತೆ ಒಳಪುಟಗಳಲ್ಲಿ ಅಥವಾ ಮುಖಪುಟದಲ್ಲಿ ಸಿಂಗಲ್ ಕಾಲಮ್ಮಿನಲ್ಲಿ ವರದಿ ಮಾಡಿದರೆ, ಓದುಗರಿಗೆ ಕಿರಿಕಿರಿ ಆಗಬಹುದು. ಇಷ್ಟೆಲ್ಲಾ ಜನ ಸಾಯುತ್ತಿದ್ದರೂ, ಇಷ್ಟು ಚಿಕ್ಕ ಅಕ್ಷರಗಳಲ್ಲಿ ವರದಿ ಮಾಡಿದ್ದಾರಲ್ಲ ಎಂದು ಅಚ್ಚರಿಪಡಬಹುದು.

ಆದರೆ ಈ ಸಂದರ್ಭದಲ್ಲಿ ಅಮೆರಿಕ ಪತ್ರಿಕೆಗಳು ಮೆರೆಯುತ್ತಿರುವ ವೃತ್ತಿಪರತೆ ಮತ್ತು ಸೂಕ್ಷ್ಮ ಮನಸ್ಸಿನ, ತೂಕಬದ್ಧ, ಸಂಯಮದ ವರದಿಗಾರಿಕೆ ಎಂಥವರಿಗಾದರೂ ಮಾದರಿಯೇ. Newspaper which is not dependent on the gory of death will exhibit the glory of professionalism ಎಂಬ ಮಾತಿದೆ. ಇದನ್ನು ಅಮೆರಿಕದ ಮುಖ್ಯವಾಹಿನಿ ಪತ್ರಿಕೆಗಳು ಅಕ್ಷರಶಃ ಪಾಲಿಸುತ್ತಿವೆ. ಸೆನ್ಸೇಷನ್ ಮಾಡುವುದು ಉದ್ದೇಶವಾದರೆ, ಆಗ ಒಂದು ಸಾವು ಸಹ ಹೆಡ್ ಲೈನ್‌ನಲ್ಲಿ ಅಬ್ಬರಿಸುತ್ತದೆ. ಅದು ಸಂಭಾವಿತರ (Gentleman) ಪತ್ರಿಕೋದ್ಯಮ ಅಲ್ಲ. ಅಮೆರಿಕ ಹಿಂದೆಂದೂ ಇಷ್ಟು ಸಾವನ್ನು ಕಂಡಿರಲಿಲ್ಲ. ವಿಯೆಟ್ನಾಮ್ ಯುದ್ಧದಲ್ಲಿ ಐವತ್ತೆಂಟು ಸಾವಿರ ಮಂದಿ ಸತ್ತಿದ್ದರು. ಕೋವಿಡ್ ಅದಕ್ಕಿಂತ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದೆ. ಆದರೆ ಪತ್ರಿಕೆ, ಟಿವಿಗಳು ಮಾತ್ರ ಜನರನ್ನು ಹೆದರಿಸುತ್ತಿಲ್ಲ. ಇದು ನಮಗೆ ದೊಡ್ಡ ಪಾಠ.

ನೆಹರು ಮಾಡಿದ ಅಚಾತುರ್ಯವನ್ನು ಮೆಟ್ಟಿ ವಿಶ್ವಗುರುವಾಗಿದೆ ಭಾರತ

ವೀಕೆಂಡ್ ವಿಥ್ ಮೋಹನ್

ಮೋಹನ್ ವಿಶ್ವ
camohanbn@gmail.com

ಸಾವಿರಾರು ವರ್ಷಗಳ ಇತಿಹಾಸವಿರುವ ಭಾರತ ದೇಶದಲ್ಲಿ, ರಾಜ ಮಹಾರಾಜರುಗಳ ಕಾಲದಲ್ಲಿ ಸಕಲ ಸಂಪತ್ತುಗಳು ತುಂಬಿ ತುಳುಕುತ್ತಿದ್ದವು. ನಮ್ಮಲ್ಲಿನ ಸಂಪತ್ತುಗಳಿಗೆ ಬರವೇ ಇರಲಿಲ್ಲ, ಕಾಲ ಕಾಲಕ್ಕೆ ಮಳೆಯಾಗುತ್ತಿತ್ತು, ಬೆಳೆಯಾಗುತ್ತಿತ್ತು. ಜನರು ಅಷ್ಟ ಐಶ್ವರ್ಯಗಳೊಂದಿಗೆ ಜೀವನ ನಡೆಸುತ್ತಿದ್ದರು. ಯೂರೋಪಿನ ಜನರು ಸಮುದ್ರ ಮಾರ್ಗ ಹುಡುಕುತ್ತ ಭಾರತದತ್ತ ಬಂದಾಕ್ಷಣ, ಮೊದಲು ಅವರಿಗೆ ಕಂಡದ್ದು ನಮ್ಮಲ್ಲಿನ ಐಶ್ವರ್ಯತುಂಬಿದ ಜೀವನ. ಯಾವಾಗ ಅವರ ಕಣ್ಣಿಗೆ ನಾವು ಬಿದ್ದೆವೋ ಅಂದೇ ನಮ್ಮನ್ನು ಲೂಟಿ ಮಾಡಲು ಸಜ್ಜಾದರು. ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟಿಷರು ನಮ್ಮ ಜತೆಗಿನ ವ್ಯಾಪಾರ ಸಂಬಂಧ ವೃದ್ಧಿಸಲು ಬಂದರು. ಕೊನೆಗೆ ನಮ್ಮ ನಮ್ಮಲ್ಲಿಯೇ ಜಗಳ ತಂದಿಟ್ಟು, ನಾವುಗಳೇ ಜಗಳವಾಡುವಂತೆ ಮಾಡಿ ನಮ್ಮಲ್ಲಿ ಉಳಿದುಕೊಂಡಿದ್ದಂತಹ ಅಲ್ಪ ಸ್ವಲ್ಪ ಒಗ್ಗಟ್ಟನ್ನು ಒಡೆದು, ನಮ್ಮ ಅಪಾರ ಸಂಪತ್ತನ್ನು ತಮ್ಮ ತಮ್ಮ ದೇಶಗಳಿಗೆ ರವಾನಿಸಿದರು. ಇಷ್ಟೆಲ್ಲ ಮಾಡಿಯೂ ಅವರ ದಾಹ ತೀರಲಿಲ್ಲ, ಭಾರತದಲ್ಲಿ ಯಾವಾಗ ಸ್ವತಂತ್ರದ ಕೂಗು ಹೆಚ್ಚಾಯಿತೋ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಿ ಗಂಟುಮೂಟೆ ಕಟ್ಟುವ ಮುನ್ನ, ತಾವು ಹೊರಟರೂ ಸಹ ನಮ್ಮಲ್ಲಿನ ಜಗಳಗಳು ಹಾಗೆಯೇ ನೂರಾರು ವರ್ಷಗಳ ಕಾಲ ಉಳಿಯುವಂತೆ ಮಾಡಿದರು. ಅದಕ್ಕೆ ತಕ್ಕಂತೆ

ಸ್ವಾರ್ಥದಿಂದ ತಮ್ಮ ಬೇಳೆ ಬೇಯಿಸಲು ಏನನ್ನಾದರೂ ಮಾಡಲು ಸಿದ್ಧವಿದ್ದ ನೆಹರುರ ಕೈಗೆ ದೇಶದ ಆಡಳಿತ ಸಿಕ್ಕಿತು. ನೆಹರು

ಯಾರ್ಯಾರಿಗೆ ಮೋಸ ಮಾಡಿದರೆಂಬ ಇತಿಹಾಸವನ್ನು ಮತ್ತೆ ಮತ್ತೆ ಹೇಳುವುದಿಲ್ಲ, ಎಲ್ಲವು ಜಗಜ್ಜಾಹೀರವಾಗಿದೆ. ಈ ವ್ಯಕ್ತಿಯೂ ತನ್ನ ಸ್ವಾರ್ಥಕ್ಕಾಗಿ ಯಾವ ಮಟ್ಟಕ್ಕಾದರೂ ಇಳಿಯುವವರಿದ್ದರು. ಸ್ವತಃ ಅಂಬೇಡ್ಕರರನ್ನು ಅವರ ಶಿಷ್ಯನಿಂದಲೇ ಚುನಾವಣೆಯಲ್ಲಿ ಸೋಲುವಂತೆ ಮಾಡಿದ್ದೂ ಇವರೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಇಂತಹ ಹಲವಾರು ಕೆಲಸವನ್ನು ಕೇವಲ ತನ್ನ ಕುಟುಂಬದ ಸ್ವಾರ್ಥಕ್ಕಾಗಿ ಮಾಡಿಕೊಂಡು ಬಂದಿರುವ ನೆಹರು ಮಾಡಿದ್ದ ಮತ್ತೊಂದು ಅಚಾತುರ್ಯ ಈಗ ಮತ್ತೊಮ್ಮೆ ನೆನಪಾಯಿತು. ಹೌದು ಇತ್ತೀಚಿಗೆ ಡಾಕ್ಟರ್ ಹರ್ಷವರ್ಧನ್ ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ ಮಂಡಳಿಯ ಅಧ್ಯಕ್ಷರಾಗುತ್ತಿದ್ದಾರೆ. ಆರೋಗ್ಯದ ವಿಷಯದಲ್ಲಿ ಇಡೀ ಜಗತ್ತಿಗೆ ದೊಡ್ಡಣ್ಣನಾಗಿರುವ ಸಂಸ್ಥೆಯ ಅಧ್ಯಕ್ಷನಾಗುವುದು ಅಷ್ಟು ಸುಲಭದ ವಿಚಾರವಲ್ಲ, ಇಷ್ಟು ದೊಡ್ಡ ಸಂಸ್ಥೆಯ ಅಧ್ಯಕ್ಷನಾಗಿ ಇಡೀ ಜಗತ್ತೇ ಭಾರತದೆಡೆಗೆ ತಿರುಗಿ ನೋಡುವಂತೆ ಮಾಡಿದ್ದು ಭಾರತದ ಸಾಧನೆಗೆ ಮತ್ತೊಂದು ಗರಿ.

1955ರಲ್ಲಿ ನೆಹರು ಪ್ರಧಾನಮಂತ್ರಿಯಾಗಿದ್ದಾಗ ಅಮೆರಿಕ ದೇಶವು ಭಾರತಕ್ಕೆ ಚಿನ್ನದಂತಹ ಅವಕಾಶವೊಂದನ್ನು ನೀಡಿತ್ತು. ಅಂದಿನ ಕಾಲದಲ್ಲಿ ಚೀನಾ ದೇಶವನ್ನು ವಿಶ್ವ ಸಂಸ್ಥೆಯ ಭದ್ರತಾ ಕೌನ್ಸಿಲ್‌ನಿಂದ ಹೊರಗಿಟ್ಟು ಭಾರತವನ್ನು ಶಾಶ್ವತ ಸದಸ್ಯನಾಗುವಂತೆ ಹೇಳಿತ್ತು. ಇಂತಹ ಚಿನ್ನದಂತಹ ಅವಕಾಶವನ್ನು ಬಳಸಿಕೊಳ್ಳದ ನೆಹರು ಅಮೆರಿಕದ ಸೂಚನೆಯನ್ನು ಪರಿಗಣಿಸದೆ ತಿರಸ್ಕರಿಸಿದರು. ದೇಶದ ಎಲ್ಲ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ನೆಹರು ಹೇಳಿದ್ದು ಹೀಗಿತ್ತು. ನಾವು ಚೀನಾವನ್ನು ಭದ್ರತಾ ಕೌನ್ಸಿಲ್‌ನಿಂದ ದೂರವಿಡುವುದು ಅನ್ಯಾಯದ ಕೆಲಸ, ಆದ್ದರಿಂದ ಅಮೆರಿಕದ ಸಲಹೆಯನ್ನು ನಾವು ತಿರಸ್ಕರಿಸಬೇಕು. ಭಾರತದ ಈಗಿನ ಪರಿಸ್ಥಿತಿಯಲ್ಲಿ ಭದ್ರತಾ ಕೌನ್ಸಿಲ್‌ನ ಸದಸ್ಯರಾಗುವುದು ಸರಿಯಲ್ಲ, ಮೊದಲು ಚೀನಾ ದೇಶಕ್ಕೆ ದಕ್ಕಬೇಕಿರುವ ಅಧಿಕಾರವನ್ನು ನೀಡಿದ ಮೇಲಷ್ಟೇ ಅಮೆರಿಕ ದೇಶವು ಭಾರತವನ್ನು ಪರಿಗಣಿಸಲಿ.

ಕೇವಲ ಬೆರಳೆಣಿಕೆಯಷ್ಟು ರಾಜ್ಯಗಳಲ್ಲಿ ಅಧಿಕಾರವಿರುವ ಇಂದಿನ ಕಾಂಗ್ರೆಸ್ಸಿನ ನಾಯಕರು ಹಾಗೂ ಮುಖ್ಯಮಂತ್ರಿಗಳು ಆಂಟನಿಯೋ ಮೈನೋಮಾತನ್ನು ಚಾಚೂ ತಪ್ಪದೆ ಕೇಳುವಾಗ, ನೆಹರು ಕಾಲದಲ್ಲಿ ಇಡೀ ದೇಶದಲ್ಲಿಯೇ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ಸಿನ ನಾಯಕರು ನೆಹರು ಮಾತಿಗೆ ಇಲ್ಲ ಎನ್ನುವರೇ? ನೋ ಚಾನ್ಸ್ ಇಲ್ಲವೇ ಇಲ್ಲ, ಕೇವಲ ಹೆಸರಿಗಷ್ಟೇ ನೆಹರು ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದು, ಅಷ್ಟುಹೊತ್ತಿಗಾಗಲೇ ನೆಹರು ತನ್ನ ನಿರ್ಧಾರವನ್ನು ತೆಗೆದುಕೊಂಡಾಗಿತ್ತು.

ನೆಹರು ಬರೆದಿರುವ ಪತ್ರದ ಪದಬಳಕೆಯನ್ನೊಮ್ಮೆ ಗಮನಿಸಿ, ಇವರ ಭಾರತವನ್ನು ಕಟ್ಟುವ ದೂರದೃಷ್ಟಿಯು ಎಷ್ಟು ದುರ್ಬಲವಾಗಿತ್ತೆಂದು ತಿಳಿಯುತ್ತದೆ. ಅಂದಿನ ಕಾಲದಲ್ಲಿ ಅಮೆರಿಕ ದೇಶವು ಎರಡನೇ ಮಹಾಯುದ್ಧದಲ್ಲಿ ವಿಜಯಶಾಲಿಯಾಗಿ ಜಗತ್ತಿನ ದೊಡ್ಡಣ್ಣನಾಗಿ ಹೊರಹೊಮ್ಮಿತ್ತು. ಜಗತ್ತಿನ ದೊಡ್ಡಣ್ಣನ ಮಾತನ್ನು ಅಂದೇ ಕೇಳಿದ್ದರೆ ಇಷ್ಟು ಹೊತ್ತಿಗಾಗಲೇ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಟ್ಟಿಯಲ್ಲಿರುತ್ತಿತ್ತು. 2019ರ ಚುನಾವಣೆಯಲ್ಲಿ ರಾಹುಲ್ ಗಾಂಧಿ ಮತ್ತೊಮ್ಮೆ ಗರೀಭಿ ಹಟಾವೋ ಎಂಬ ಘೋಷಣೆಯೊಂದಿಗೆ ಜನರ ಮುಂದೆ ವೋಟು ಕೇಳುವ ನಾಟಕವಾಡಬೇಕಾಯಿತು.

ಜಗತ್ತಿನಲ್ಲಿ ಚೀನಾ ದೇಶದ ಗುರುತೇ ಇಲ್ಲದ ಸಮಯದಲ್ಲಿ, ಅಮೆರಿಕದ ಮಾತನ್ನು ನೆಹರು ಕೇಳಲಿಲ್ಲ. ಜಗತ್ತಿಗೆ ಭಾರತವನ್ನು ಹಾವಾಡಿಗರ ದೇಶವೆಂಬಂತೆ ಬಿಂಬಿಸಿದರು. ಅಂದು ಚೀನಾ ದೇಶದ ಪರವಾಗಿ ನಿಂತ ಭಾರತಕ್ಕೆ ಸಿಕ್ಕ ಉಡುಗರೆ ಏನು? 1962ರಲ್ಲಿ

ಕಾಲು ಕೆದರಿಕೊಂಡು ಯುದ್ಧಕ್ಕೆ ಬಂತು ಚೀನಾ. ಇಷ್ಟಾದರೂ ಅವರ ನಾಟಕ ಮುಗಿಯಲಿಲ್ಲ, ಇಂದಿಗೂ ದೋಕ್ಲಹಮ್ ವಿಚಾರದಲ್ಲಿ ಕಾಲು ಕೆದರಿಕೊಂಡು ಜಗಳ ಮಾಡುತ್ತಲೇ ಇದ್ದಾರೆ. ಈಗ ನೇಪಾಳಕ್ಕೆ ಹಿಂದೆಯಿಂದ ಕುಮ್ಮಕ್ಕು ನೀಡಿ ಹೊಸದೊಂದು ಕ್ಯಾತೆ ತೆಗೆಸಿದ್ದಾರೆ. ತಿನ್ನೋಕ್ಕೆ ಗತಿಯಿಲ್ಲದ ನೇಪಾಳಕ್ಕೂ ನಾವು ಮಾಡಿದ ಸಹಾಯ ಹೆಚ್ಚಾಯಿತು. ಕಮ್ಯುನಿಸ್ಟ್‌ಗಳಿಗೆ ನಿಯತ್ತಿಲ್ಲವೆಂಬುದನ್ನು ಮತ್ತೊಮ್ಮೆ ನೇಪಾಳದ ಇತ್ತೀಚಿನ ನಡೆಯಿಂದ ಸಾಬೀತಾಗಿದೆ. ಅಂದು ಚೀನಾ ದೇಶದ ಪರವಾಗಿ ನೆಹರು ನಿಂತರು, ಇಂದು ಇದೇ ಚೀನಾ ದೇಶವು ಭಾರತದ ಪರವಾಗಿ ವಿಶ್ವ ಸಂಸ್ಥೆಯ ಭದ್ರತಾ ಸದಸ್ಯತ್ವಕ್ಕೆ ಅಡ್ಡಗಾಲು ಹಾಕುತ್ತಿದೆ. ಪ್ರತಿಯೊಂದು ಬಾರಿಯೂ ಜಗತ್ತಿನ ಇತರ ದೇಶಗಳು ಭಾರತದ ಪರವಾಗಿ ನಿಂತರೂ ಚೀನಾ ಮಾತ್ರ ಭಾರತದ ಪರವಾಗಿ ನಿಲ್ಲುತ್ತಿಲ್ಲ, ನೆಹರು ಮಾಡಿದ್ದ ತಪ್ಪನ್ನು ಅವರದ್ದೇ ಪಕ್ಷದ ಶಶಿ ತರೂರ್ ಒಪ್ಪಿಕೊಂಡಿದ್ದರು. ನಂತರ ತಮ್ಮದೇ ಶೈಲಿಯಲ್ಲಿ, ನೆಹರೂರನ್ನು ಸಮರ್ಥಿಸಿಕೊಂಡರು. ಶಶಿ ತರೂರ್ ಪ್ರಕಾರ ಅಂದಿನ ಪರಿಸ್ಥಿತಿಯಲ್ಲಿ ಚೀನಾ ದೇಶದ ಜತೆಗಿನ ಉತ್ತಮ ಸಂಬಂಧ ಕಾಯ್ದುಕೊಳ್ಳಲು ನೆಹರು ಆ ಕೆಲಸ ಮಾಡಬೇಕಾಯಿತಂತೆ. ನನಗೆ ಅರ್ಥ ಆಗದ ವಿಷಯವೆಂದರೆ, ಒಬ್ಬ ಪ್ರಧಾನಿಯು ತನ್ನ ದೇಶವನ್ನು ಮುಂದುವರಿಸಲು ಬಯಸುತ್ತಾನೋ ಅಥವಾ ಬೇರೆಯವರಿಗೆ ಸಹಾಯಮಾಡಿ ತಾನು ಹಿಂದೆ ಹೋಗಲು ಬಯಸುತ್ತಾನೋ? ಅಷ್ಟು ತಿಳಿವಳಿಕೆ ಇಲ್ಲದ ಪ್ರಧಾನಿಯನ್ನು ನಮ್ಮ ದೇಶದ ಮೊದಲ ಪ್ರಧಾನಿಯನ್ನಾಗಿ ಪಡೆದದ್ದು ನಮ್ಮ ದೌರ್ಭಾಗ್ಯವೇ ಸರಿ.

ಇವರು ಮಾಡಿದ ತಪ್ಪಿನಿಂದ ಜಗತ್ತಿನಲ್ಲಿ ಭಾರತವು ತನ್ನ ಸ್ಥಾನವನ್ನು ದಶಕಗಳೇ ಕಳೆದರೂ ಮೇಲೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಾತು ಮಾತಿಗೂ ನರೇಂದ್ರ ಮೋದಿಯನ್ನು, ವಿದೇಶ ಸುತ್ತುವ ಶೋಕಿ ಇರುವವರು ಎನ್ನುವವರಿಗೆ ಇಂದು ನರೇಂದ್ರ ಮೋದಿ ಏಕೆ ವಿದೇಶ ಸುತ್ತುತ್ತಿದ್ದಾರೆಂಬುದು ಅರ್ಥವಾಗಿರಬೇಕು. ನರೇಂದ್ರ ಮೋದಿ ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಬೆಳೆಸದಿದ್ದರೆ ಪಾಪಿ ಪಾಕಿಸ್ತಾನದ ಭಯೋತ್ಪಾದಕರ ನೆಲೆಗಳ ಮೇಲೆ ಬಾಂಬ್ ಹಾಕಿದಾಗ, ಪಕ್ಕದ ಚೀನಾ ತುಟಿಕ್ ಪಿಟಿಕ್ ಅನ್ನಲಿಲ್ಲ, ಅದೇ ಜಾಗದಲ್ಲಿ ನೆಹರು ಇದ್ದಿದ್ದರೆ ಏನಾಗುತ್ತಿತ್ತು ಯೋಚಿಸಿ ನೋಡಿ? 2008ರಲ್ಲಿ ಮುಂಬೈನ ಬೀದಿ ಬೀದಿಗಳಲ್ಲಿ ನಾಗರೀಕರ ಮೇಲೆ ಭಯೋತ್ಪಾದಕರು ದಾಳಿ ಮಾಡಿದಾಗ, ಇದೇ ಚೀನಾಕ್ಕೆ ಹೆದರಿ ಪ್ರಧಾನಿ ಮನಮೋಹನ್ ಸಿಂಗ್ ಪಾಕಿಸ್ತಾನಕ್ಕೆ ಸರಿಯಾದ ವಾರ್ನಿಂಗ್ ಸಹ ನೀಡಲಿಲ್ಲ, 2011ರಲ್ಲಿ ಅಮೆರಿಕ ದೇಶವು ತನ್ನ ವಿದ್ಯುತ್ ಅಣುಸ್ಥಾವರದ ತ್ಯಾಜ್ಯವನ್ನು ತಂದು ಭಾರತದಲ್ಲಿ ಸುರಿಯಲು ಮುಂದಾದಾಗ, ಇದೇ ಮನಮೋಹನ್ ಸಿಂಗ್ ಒಪ್ಪಿಗೆ ಕೊಡಲು ತಯಾರಾಗಿದ್ದರು. ಇಂದು ಇದೇ ಭಾರತವು ಕರೋನಾ ನಿಯಂತ್ರಿಸಲು ಅಮೆರಿಕ ದೇಶಕ್ಕೆ ಬೇಕಾದಂಥ ಹೈಡ್ರೋಕ್ಲೋರೋಕ್ವಿನ್ ಮಾತ್ರೆಗಳನ್ನು ಟನ್‌ಗಟ್ಟಲೆ ನೀಡಿದೆ. ಮಾತು ಮಾತಿಗೂ ಭಾರತವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನನ್ನ ಮಿತ್ರ ಮೋದಿ ಎಂದು ಇಡೀ ಜಗತ್ತಿನ ಮುಂದೆ ಹೇಳುವಾಗ, ನೆನಪಾದದ್ದು ಮತ್ತದೇ ನೆಹರು. ಒಂದು ಸಲವಾದರೂ ಜಗತ್ತಿನ ಮುಂದುವರಿದ ರಾಷ್ಟ್ರಗಳು ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಈ ಮಟ್ಟಿಗೆ ಭಾರತವನ್ನು ಹೊಗಳಿದ್ದವೇ?

ಭಾರತವು ದೊಡ್ಡಣ್ಣನ ದೊಡ್ಡ ಸಮಸ್ಯೆಗೆ ನೆರವಾಗುತ್ತದೆ ಎಂದು ಕನಸಿನಲ್ಲಾದರೂ ಯೋಚಿಸಿದ್ದರೆ? ಇಡೀ ಜಗತ್ತಿಗೆ ಗೊತ್ತಿರುವ ಸಂಗತಿಯೆಂದರೆ ಚೀನಾ ದೇಶವು ಜಗತ್ತಿನಲ್ಲಿ ಪ್ರತಿಯೊಬ್ಬರೂ, ತನ್ನ ಮೇಲೆಯೇ ಅವಲಂಬಿತರಾಗುವಂತಹ ಪರಿಸ್ಥಿತಿಯನ್ನು ತಂದಿತ್ತು. ನೋ ಡೌಟ್, ಅವರು ಕಷ್ಟಪಟ್ಟು ಮೇಲೆ ಬಂದಿದ್ದಾರೆ. ಆದರೆ ಮೇಲೆ ಬಂದ ಮೇಲೆ ತಮ್ಮ ಸಾಮ್ರಾಜ್ಯ ಸ್ಥಾಪಿಸಲು ಪರಿಸ್ಥಿತಿಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಬಾರದು. ಕರೋನಾ ವಿಚಾರದಲ್ಲಿ ತಮ್ಮ ಸ್ವಾರ್ಥಕ್ಕಾಗಿ ಇಡೀ ಜಗತ್ತನ್ನೇ ನಾಶ ಮಾಡಲು ಹೊರಟಿದ್ದ ಚೀನಾದ ಮುಖವಾಡ ಕಳಚಿದೆ. ಇಡೀ ಜಗತ್ತೇ ಚೀನಾದೇಶವನ್ನು ನಿಧಾನವಾಗಿ ಬಹಿಷ್ಕರಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಆಗ ವಿಶ್ವಕ್ಕೆ ಏಷ್ಯಾ ಖಂಡದಲ್ಲಿ ವಿಶ್ವಾಸದಿಂದ ಕಾಣುವ ಏಕೈಕ ರಾಷ್ಟ್ರ ಭಾರತ. ಈಗಾಗಲೇ ವಿಶ್ವ ಆರೋಗ್ಯ ಸಂಸ್ಥೆಯು, ಚೀನಾದ ತಾಳಕ್ಕೆ ಕುಣಿಯುತ್ತಿದೆ ಎಂಬ ವಿಷಯವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳುತ್ತಿದ್ದಾರೆ. ಅಮೆರಿಕ ದೇಶವು ನೀಡುತ್ತಿದ್ದ 300 ಮಿಲಿಯನ್ ಡಾಲರ್‌ನಷ್ಟು ಹಣವನ್ನು, ನೆರವನ್ನು ಇನ್ನು ಮುಂದೆ ನೀಡುವುದಿಲ್ಲವೆಂದು ಹೇಳಿ ತಡೆ ಹಿಡಿದಿದ್ದಾರೆ. ಇದರ ಜತೆಗೆ ಭಾರತವು ಕರೋನಾ ವಿರುದ್ಧ ಹೋರಾಡುತ್ತಿರುವ ರೀತಿಯನ್ನು ಇಡೀ ವಿಶ್ವವೇ ಮೆಚ್ಚಿದೆ. ಇದರ ಪರಿಣಾಮವಾಗಿ ವಿಶ್ವ ಆರೋಗ್ಯ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಡಾ. ಹರ್ಷವರ್ಧನ್ ನೇಮಕಗೊಳ್ಳುತ್ತಿದ್ದಾರೆ.



ಭಾರತವು ವಿಶ್ವದಲ್ಲಿ ತನ್ನ ಛಾಪು ಮೂಡಿಸಲು, ಇದಕ್ಕಿಂತ ಮತ್ತೇನು ಬೇಕು? ಈ ಸಂತೋಷದ ವಿಷಯವನ್ನು ದೇಶದ ಪ್ರತಿಯೊಂದು ರಾಜಕೀಯ ನಾಯಕರೂ ಮೆಚ್ಚಲೇಬೇಕು. ಆದರೆ ವಿರೋಧ ಪಕ್ಷಗಳ ನಾಯಕರು ಒಂದಾದರೂ ಮೆಚ್ಚುಗೆ ವ್ಯಕ್ತಪಡಿಸುವ ಟ್ವೀಟ್ ನೋಡಿದ್ದೀರಾ? ನಾನಂತೂ ನೋಡಿಲ್ಲ, ನೊಬೆಲ್ ಪ್ರಶಸ್ತಿ ಪುರಸ್ಕೃತ ಅಭಿಜಿತ್ ಬಾನರ್ಜಿಯ ಜತೆ ಸಂವಾದ ನಡೆಸುವ ರಾಹುಲ್ ಗಾಂಧಿ ಒಮ್ಮೆಯಾದರೂ ಇದರ ಬಗ್ಗೆ ಮಾತನಾಡಲಿಲ್ಲ, ತನ್ನ ಅಜ್ಜಿ, ಅಮ್ಮ, ಅಪ್ಪ, ಮುತ್ತಾತ ಮಾಡಿದಂತಹ ತಪ್ಪುಗಳನ್ನು ನಾನಾದರೂ ಮಾಡಬಾರದೆಂಬ ಕನಿಷ್ಠ ಜ್ಞಾನ ಇಲ್ಲದವನಿಂದ ಏನನ್ನು ನಿರೀಕ್ಷಿಸಲು ಸಾಧ್ಯ? ವಿಶ್ವ ಆರೋಗ್ಯ ಸಂಸ್ಥೆಯ ಬೆಲೆ ಏನಾದರೂ ಇವನಿಗೆ ಗೊತ್ತಾ? 1955ರಲ್ಲಿ ವಿಶ್ವ ಸಂಸ್ಥೆಯ ಮಹತ್ತರ ಹುದ್ದೆಯನ್ನು ಅಲಂಕರಿಸುವ ಅವಕಾಶವನ್ನು ಕೈಚೆಲ್ಲಿದ್ದವರ ವಂಶಸ್ಥನಿಗೆ ಹೇಗೆ ತಾನೇ ತಿಳಿಯಲು ಸಾಧ್ಯ. ಇವರಿಗೆ ತಿಳಿದಿರುವುದೊಂದೇ ಸ್ವಾರ್ಥದ ಅಧಿಕಾರ. ತಮ್ಮ ಪಕ್ಷದಲ್ಲಿನ ಅಧ್ಯಕ್ಷ ಸ್ಥಾನದ ಮುಂದೆ ಜಗತ್ತಿನ ಯಾವುದೇ ಹುದ್ದೆ ದೊಡ್ಡದಲ್ಲವೆಂದು ನಂಬಿರುವ ವಂಶದವರಿವರು, ಆ ಹುದ್ದೆಯನ್ನು ಅಲಂಕರಿಸಲು ಇವರು ತಮ್ಮ ಪಕ್ಷದಲ್ಲಿಯೂ ಪ್ರಜಾಪ್ರಭುತ್ವವನ್ನು ಬಳಸುವುದಿಲ್ಲ, ಅಪ್ಪ, ಅಮ್ಮ, ಮಗ, ಅಕ್ಕ, ಅವರ ಮಕ್ಕಳು ಅಷ್ಟೇ ಅಲಂಕರಿಸಬೇಕು.

1991ರಲ್ಲಿ ಭಾರತವು ಯಾವ ಪರಿಸ್ಥಿತಿಯಲ್ಲಿತ್ತೆಂದರೆ, ನಮ್ಮಲ್ಲಿನ ಚಿನ್ನವನ್ನು ಬ್ರಿಟಿಷರಿಗೆ ಅಡವಿಟ್ಟು ಸಾಲ ತಂದು ದೇಶವನ್ನು ನಡೆಸಬೇಕಾಯಿತು. ಮಾತು ಮಾತಿಗೂ ನಾವು 1991ರ ಬಿಕ್ಕಟ್ಟನ್ನು ಪರಿಹರಿಸಿದ್ದೇವೆಂದು ಹೇಳಿಕೊಳ್ಳುವ ಕಾಂಗ್ರೆಸ್ಸಿಗರಿಗೆ, ಆ ಬಿಕ್ಕಟ್ಟು ಹೇಗೆ ಸೃಷ್ಟಿಯಾಯಿತೆಂದು ಹೇಳಲು ಧೈರ್ಯವಿಲ್ಲ, ಚಿನ್ನವನ್ನು ಅಡವಿಟ್ಟ ಭಾರತವೆಲ್ಲಿ, ವಿಶ್ವ ಆರೋಗ್ಯ ಸಂಸ್ಥೆಯನ್ನು ಮುನ್ನಡೆಸಲು ಮುಂದಾಗಿರುವ ಭಾರತವೆಲ್ಲಿ? ಯಾವಾಗ ಚೀನಾ ದೇಶವು ತನ್ನಲ್ಲಿನ ಕರೋನಾ ಕೇಸುಗಳು ಕೇವಲ 80,000 ವೆಂದು ಸುಳ್ಳು ಹೇಳಿತೋ ಅಂದೇ ಅದರ ಬುದ್ಧಿ ಇಡೀ ಜಗತ್ತಿಗೆ ಗೊತ್ತಾಯಿತು. ಚೀನಾದ ತಾಳಕ್ಕೆ ತಕ್ಕಂತೆ ವಿಶ್ವ ಆರೋಗ್ಯ ಸಂಸ್ಥೆಯು ಕುಣಿಯಲು ಶುರುಮಾಡಿದ ಮೇಲಂತೂ ಚೀನಾ ತನ್ನನ್ನು ಸಮರ್ಥಿಸಿಕೊಳ್ಳಲು ಯಾವ ಮಟ್ಟಕ್ಕೆ ಬೇಕಾದರೂ ಇಳಿಯುತ್ತದೆಯೆಂಬುದು ಮತ್ತೊಮ್ಮೆ ಸಾಬೀತಾಯಿತು. ಯೂರೋಪಿನ ರಾಷ್ಟ್ರಗಳು ಅಮೆರಿಕದೊಂದಿಗೆ ಸೇರಿ ವಿಶ್ವ ಆರೋಗ್ಯ ಸಂಸ್ಥೆಯ ಬಂಡವಾಳ ಬಯಲು ಮಾಡಿದ ಮೇಲೆ, ಬಲಿಷ್ಠ ರಾಷ್ಟ್ರಗಳ ಕಣ್ಣಿಗೆ ಬಿದ್ದದ್ದು ಭಾರತ, 130 ಕೋಟಿ ಜನಸಂಖ್ಯೆ ಇರುವ ಒಂದು ದೇಶವನ್ನು 45 ದಿನಗಳ ಕಾಲ ಲಾಕ್ ಡೌನ್ ಮಾಡುವುದು ಸುಲಭದ ಮಾತಲ್ಲ, ಅಮೆರಿಕದಂತಹ ಬಲಿಷ್ಠ ರಾಷ್ಟ್ರವೇ ಲಾಕ್ ಡೌನ್ ಮಾಡಲಿಲ್ಲ, ಅಂತಹ ಅಸಾಧ್ಯವಾದ ಕೆಲಸವನ್ನು ಭಾರತ ಮಾಡಿತು. ಆರ್ಥಿಕತೆಯು ಪಾತಾಳಕ್ಕಿಳಿಯುತ್ತದೆ ಎಂಬ ವಿಷಯ ತಿಳಿದಿದ್ದರೂ ಸಹ, ಆರೋಗ್ಯವೇ ಭಾಗ್ಯವೆಂಬಂತೆ ಜನರ ಜೀವಕ್ಕೆ ಬೆಲೆ ನೀಡಲಾಯಿತು. ನಮ್ಮ ಸೈನಿಕರ ಜೀವ ಹೋದಾಗ ಕೊಂಚವೂ ಮರುಗದೇ, ರಾಜಕೀಯ ಮಾಡಿದಂತಹ ಪಕ್ಷ ಕಾಂಗ್ರೆಸ್ ಇಂದು ವಲಸೆ ಕಾರ್ಮಿಕರ ಜೀವದ ಬಗ್ಗೆ ಮಾತನಾಡುತ್ತಾರೆ. ಇಡೀ ವಿಶ್ವವೇ ಕರೋನಾ ವಿಚಾರದಲ್ಲಿ ಭಾರತವು ತೆಗೆದುಕೊಂಡಂತಹ ದೃಢ ನಿರ್ಧಾರಗಳನ್ನು ಪ್ರಶಂಸಿಸುತ್ತಿರುವಾಗ ಒಳಗಿನವರು ಮಾತ್ರ ರಾಜಕೀಯ ಮಾಡುತ್ತಿದ್ದಾರೆ.

ಕಾಂಗ್ರೆಸ್ಸಿನ ಆಡಳಿತ ಯಾವ ರೀತಿ ಇತ್ತೆಂದರೆ, ಭಾರತದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ವಿಶ್ವ ನಾಯಕರ ಅನುಮತಿ ಬೇಕಿತ್ತು. ಪಾಕಿಸ್ತಾನಕ್ಕೆ ಹೆದರಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಲ್ಲ, ಯಾಕೆಂದರೆ ಪಾಕಿಸ್ತಾನಕ್ಕೆ ಚೀನಾದ ಅಭಯ ಹಸ್ತವಿದೆ. ಪಾಕಿಸ್ತಾನಕ್ಕೆ ಅಮೆರಿಕದ ನೆರವಿದೆ. ನಾವೇನಾದರೂ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿದರೆ, ವಿಶ್ವದ ಎರಡು ಬಲಿಷ್ಠ ರಾಷ್ಟ್ರಗಳು ನಮ್ಮ ನೆರವಿಗೆ ಬರುವುದಿಲ್ಲವೆಂಬ ಭಯವಿತ್ತು. ಮಾತು ಮಾತಿಗೂ ಮನಮೋಹನ್ ಸಿಂಗ್ ಅತ್ಯುತ್ತಮ ಪ್ರಧಾನಿಯೆಂದು ಬಾಯಿ ಬಡಿದುಕೊಳ್ಳುವ ಕಾಂಗ್ರೆಸ್ಸಿಗರಿಗೆ ಯಾಕೆ ನಮ್ಮ ದೇಶದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಿಫಲರಾದರೆಂದು ಹೇಳುವ ಧೈರ್ಯವಿದೆಯೇ? ಈಗ ನೋಡಿ 7 ದಶಕಗಳ ಕಾಶ್ಮೀರ ಸಮಸ್ಯೆಯನ್ನು, ಎರಡನೇ ಬಾರಿ ಅಧಿಕಾರಕ್ಕೆ ಬಂದ 6 ತಿಂಗಳೊಳಗೆ ಬಗೆಹರಿಸಲಾಗಿದೆ. ಯಾವ ಚೀನಾ ಕೂಡ ತುಟಿ ಬಿಚ್ಚಲಿಲ್ಲ, ಅಮೆರಿಕವಂತೂ ಕಡ್ಡಿ ಎರಡು ತುಂಡಾದ ಹಾಗೆ ಇದು ಭಾರತದ ಆಂತರಿಕ ಸಮಸ್ಯೆಯೆಂದು ಹೇಳಿಬಿಟ್ಟಿತು. ಇದು ನರೇಂದ್ರ ಮೋದಿಯವರ ವಿಶ್ವ ಪರ್ಯಟನೆಯ ಪ್ರಭಾವ. ಜಗತ್ತು ಚೀನಾವನ್ನು ಬಹಿಷ್ಕರಿಸಲು ಮುಂದಾಗಿರುವಾಗ, ಭಾರತದ ಕಡೆಗೆ ನೋಡುತ್ತಿರುವುದು ಮೋದಿಯವರ ವಿಶ್ವ ಪರ್ಯಟನೆಯ ಪ್ರಭಾವ, ಇವೆಲ್ಲವೂ ಬೆಲೆ ಕಟ್ಟಲಾಗದ ಪರಿಹಾರಗಳು.

ಒಂದು ಕಾಲದಲ್ಲಿ ಭಾರತವೆಂದರೆ ಮಲೇರಿಯ, ಪ್ಲೇಗ್, ಕಾಲರಗಳಿಂದ ಕೂಡಿದ ಬಡ ರಾಷ್ಟ್ರವೆಂದು ಜಗತ್ತು ನೋಡುತ್ತಿತ್ತು. ಇಂದು ಅದೇ ಜಗತ್ತಿಗೆ ಭಾರತದ ಶಕ್ತಿಯ ಅರಿವಾಗಿದೆ. ಸಹಸ್ರಾರು ವರ್ಷಗಳ ನಮ್ಮ ವೈದ್ಯ ಪರಂಪರೆಯ ಔಷಧೀಯ ಗುಣಗಳ ಅನಾವರಣವಾಗಿದೆ. ಅಮೆರಿಕ ದೇಶವು ಇಡೀ ವಿಶ್ವದ ಶೇ.35ರಷ್ಟು ಸಂಪನ್ಮೂಲವನ್ನು ನಿಯಂತ್ರಿಸಿದರೂ ಸಹ ಕರೋನಾ ನಿಯಂತ್ರಿಸಲು ಭಾರತದ ಔಷಧಿಯೇ ಬೇಕಾಯಿತು. ಕರೋನಾ ವೈರಸ್ಸಿಗೆ ಇನ್ನೂ ಔಷಧ ಕಂಡು ಹಿಡಿಯಲು ಅಮೆರಿಕ ದೇಶದಿಂದ ಸಾಧ್ಯವಾಗಿಲ್ಲ, ಭಾರತ ಮಾತೆಗೆ ಅಂಟಿಸಿದ್ದ ಕೊಳೆಯನ್ನು ತೆಗೆದು, ಇಡೀ ಜಗತ್ತು ಆಕೆಯ ಕಡೆಗೆ ತಿರುಗಿ ನೋಡಲು ಒಬ್ಬ ಸಮರ್ಥ ನಾಯಕನ ಅವಶ್ಯಕತೆ ಇತ್ತು. ನಾಯಕನಾದವನು ಮೊದಲಿಗೆ ತಾನೇ ಮುಂದೆ ನಿಂತು ತನ್ನ ಪ್ರಜೆಗಳನ್ನು ಕರೆದುಕೊಂಡು ಹೋಗುತ್ತಾನೆ. ಆದರೆ ಮಾಲೀಕ ಹಾಗಲ್ಲ, ಪ್ರಜೆಗಳನ್ನು ಮುಂದೆ ಬಿಟ್ಟು ತಾನು ಹಿಂದೆ ಹೋಗುತ್ತಾನೆ. ಮಾಲೀಕನಿಗೆ ತನ್ನದಷ್ಟೇ ಚಿಂತೆ, ತನ್ನನ್ನು ನಂಬಿದವರ ಚಿಂತೆ ಇಲ್ಲವೇ ಇಲ್ಲ. ಇಷ್ಟು ವರ್ಷಗಳ ಕಾಲ ಮಾಲೀಕರ ಆಡಳಿತದಿಂದ ಬೇಸತ್ತಿದ್ದ ಭಾರತ ದೇಶವು ಇಂದು ಒಬ್ಬ ಸಮರ್ಥ ನಾಯಕನ ಕೈ ಸೇರಿದೆ. ಆ ನಾಯಕನ ಸಮರ್ಥ ಆಡಳಿತದ ಪರಿಣಾಮವಾಗಿ ಇಂದು ವಿಶ್ವ ಮಟ್ಟದಲ್ಲಿ ಭಾರತವು ತನ್ನ ಛಾಪು ಮೂಡಿಸಿದೆ. ದಶಕಗಳ ಕಾಲ ಆಡಳಿತ ಮಾಡಿದ ಮಾಲೀಕನ ಮನೆಯ ಮಕ್ಕಳ ಆಸ್ತಿಪಾಸ್ತಿಯು ಹೆಚ್ಚಾಯಿತೇ ಹೊರತು ದೇಶದ ಆಸ್ತಿಪಾಸ್ತಿಯು ಹೆಚ್ಚಾಗಲಿಲ್ಲ, ಅವರನ್ನು ನಂಬಿಕೊಂಡವರ ಸಾಲ ಹೆಚ್ಚಾಯಿತು ಬಿಟ್ಟರೆ, ಜೀವನ ಸುಧಾರಣೆಯಾಗಲೇ ಇಲ್ಲ.

ಡಾ.ಹರ್ಷವರ್ಧನ್ ವಿಶ್ವ ಆರೋಗ್ಯ ಸಂಸ್ಥೆಯ ಆಡಳಿತ ಮಂಡಳಿಯನ್ನು ಮುನ್ನಡೆಸುತ್ತಾರೆಂಬ ವಿಷಯ ತಿಳಿದ ಕೂಡಲೇ, ನಾವುಗಳು ಇನ್ನುಮುಂದೆ ವಿದೇಶ ಪ್ರಯಾಣ ಮಾಡಿದಾಗ ಅಲ್ಲಿನ ಜನರ ಮುಂದೆ ನಮ್ಮ ಕಾಲರ್ ಸಡಿಲಿಸಿ ಹೆಮ್ಮೆ ಪಡಬಹುದು.

ಭಾರತದ ವಿಶ್ವ ಪರ್ಯಟನೆ ಇಲ್ಲಿಗೆ ನಿಲ್ಲುವುದಿಲ್ಲ, ಇದು ಕೇವಲ ಆರಂಭವಷ್ಟೆ, ನೆಹರು ಮಾಡಿದ ಅಚಾತುರ್ಯದಿಂದ ನಮ್ಮ ಕೈ ತಪ್ಪಿದ ವಿಶ್ವ ಸಂಸ್ಥೆಯ ಭದ್ರತಾ ಕೌನ್ಸಿಲ್‌ನ ಕಾಯಂ ಸದಸ್ಯರಾಗುವ ಸಮಯವೂ ದೂರವಿಲ್ಲವೆಂದೆನಿಸುತ್ತಿದೆ. ಒಟ್ಟಿನಲ್ಲಿ ಹಾವಾಡಿಗರ ದೇಶವಾಗಿದ್ದ (ಹಾಗೆಂದು ಬಿಂಬಿಸಲಾಗಿತ್ತು) ಭಾರತವು ಇಂದು ವಿಶ್ವಗುರುವಾಗಿದೆ.

ಕರೋನಾ ಲಾಕ್‌ಡೌನ್ ಎಂಬ ಚಕ್ರವ್ಯೂಹ!

ಅಭಿಮತ

ಸಂದೀಪ್ ಶರ್ಮಾ
mooteri.sandeepsharma@gmail.com

ಮಹಾಭಾರತದ ಅತ್ಯಂತ ಜನಪ್ರಿಯ ಪ್ರಸಂಗವೆಂದರೆ ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸುವ ಪ್ರಯತ್ನ ಬಹು ಪ್ರಶಂಸನೀಯ, ಅವನ ವೀರತ್ವ ಹಾಗೂ ಶೌರ್ಯವೇ ಇದಕ್ಕೆ ಕಾರಣ. ತನ್ನೆಲ್ಲಾ ಪೌರುಷವನ್ನು ತೋರಿದಾಗ ವ್ಯೂಹವನ್ನು ಭೇದಿಸಲು ಅಸಾಧ್ಯವಾದಾಗ ಅವನು ಮರಣ ಹೊಂದುವ ರೀತಿ ದುಃಖಕರ ಹಾಗೂ ಶೋಚನೀಯ. ಅವನು ಭೇದಿಸುವ ಶೌರ್ಯವನ್ನು ಕೊಂಡಾಡುವಾಗ, ಚಕ್ರವ್ಯೂಹದ ಮೂಲ ಪಾಠವನ್ನು ನಾವು ಹೆಚ್ಚಾಗಿ ನಿರ್ಲಕ್ಷಿಸುತ್ತೇವೆ. ಅದುವೇ ಹೀಗಿದೆ. ವ್ಯೂಹದಿಂದ ನಮಗೆ ನಿರ್ಗಮಿಸಲು ತಿಳಿಯದಿದ್ದರೆ ವ್ಯೂಹದ ಒಳಗೆ ನುಗ್ಗಿ ಪೌರುಷವಿದ್ದು, ಬುದ್ಧಿಬಲವಿಲ್ಲದಿದ್ದರೆ ಸಾವು ಕಟ್ಟಿಟ್ಟಬುತ್ತಿ. ಅಂತೆಯೇ ಈ ಲಾಕ್ ಡೌನ್‌ನ ಈಗಿನ ಪರಿಸ್ಥಿತಿ. ಲಾಕ್ ಡೌನ್ ಜಾರಿಯಾಗಿದೆ ಈಗ ಹೊರಬರುವ ಮಾರ್ಗಗಳನ್ನು ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿದ್ದೇವೆ.

ಯಾರೂ ಊಹಿಸಲು ಅಸಾಧ್ಯವಾದಂಥ ಕರೋನಾ ಮಹಾಮಾರಿಯು ಮೆಲ್ಲನೆ ನಮ್ಮ ದೇಶವನ್ನು ಆಕ್ರಮಿಸಿದಾಗ ನಾವೆಲ್ಲರೂ ಭಯಭೀತರಾದದ್ದು ಅತಿಶಯೋಕ್ತಿಯಲ್ಲ. ಪ್ರಧಾನಮಂತ್ರಿ ಮೋದಿಯವರು ಮಾರ್ಚ್ 22ರಂದು ಜನತಾ ಕರ್ಫ್ಯೂ ಹೇರಿದಂದಿನಿಂದ ಶುರುವಾದ ಲಾಕ್ ಡೌನ್ ಮೇ ಅಂತ್ಯದವರೆಗೆ ನಡೆಯುವುದು ಔಚಿತ್ಯಪೂರ್ಣವೇ. ಪ್ರಸಕ್ತ ಬೆಳವಣಿಗೆಯಲ್ಲಿ ದೇಶದ ಕೆಲವು ರಾಜ್ಯಗಳು ಹಾಗೂ ಹಲವು ಜಿಲ್ಲೆಗಳು ಒಂದೊಂದಾಗಿ ವಹಿವಾಟನ್ನು ನಡೆಸಲು ಆಯಾ ರಾಜ್ಯಸರಕಾರದ ಆದೇಶದ ಮೇರೆಗೆ ಒಪ್ಪಿಗೆ ನೀಡಿವೆ ಹಾಗೂ ಲಾಕ್ ಡೌನನ್ನು ಸಡಿಲಿಸಿದೆ. ಮಹಾಮಾರಿಯ ಸಾಂದ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಲಾಕ್ ಡೌನ್ ಹೇರಿಕೆಯನ್ನು ಕಡಿಮೆ ಹಾನಿಯೊಂದಿಗೆ ತೆರೆಯಬಹುದೇ? ಎಂಬುದು ಈಗಿರುವ ಸವಾಲಿನ ವಿಚಾರ. ಅಗತ್ಯವಾಗಿ ವಾಸ್ತವಿಕ ಗುರಿಗಳನ್ನು ಹೊಂದಿಸಿಕೊಂಡು, ಇತ್ತೀಚಿನ ವೈಜ್ಞಾನಿಕ ಮಾಹಿತಿಯನ್ನು ಬಳಸುವುದರ ಮೂಲಕ ಮತ್ತು ವ್ಯವಸ್ಥಿತ ಚೌಕಟ್ಟನ್ನು ಕಾರ್ಯಗತಗೊಳಿಸುವ ಮೂಲಕ ನಾವು ಮಹಾಮಾರಿಯ ಹರಡುವಿಕೆಯ ಸಾಂದ್ರತೆಯನ್ನು ಕಡಿಮೆಗೊಳಿಸಿ ಹಾನಿಯನ್ನು ತಡೆಗಟ್ಟಬಹುದಾಗಿದೆ.

ಕಳೆದ ಎರಡು ತಿಂಗಳುಗಳಲ್ಲಿ, ಕೋವಿಡ್ -19ರ ಪ್ರಸರಣ ಚಲನಪ್ರಕ್ರಿಯೆಯ ಬಗ್ಗೆ ಅಪಾರ ಪ್ರಮಾಣದ ಸಂಶೋಧನೆಗಳನ್ನು ಪ್ರಕಟಿಸಲಾಗಿದೆ. ಸಂಶೋಧನೆಯು ಈ ಕೆಳಗಿನ ತೀರ್ಮಾನಗಳಿಗೆ ವ್ಯಾಪಕವಾಗಿ ಒಮ್ಮುಖವಾಗುತ್ತಿದೆ. ಮೊದಲನೆಯದಾಗಿ, ಪ್ರಸರಣದ ಪ್ರಮುಖ ವಿಧಾನವೆಂದರೆ ಉಸಿರಾಟದ ಹನಿಗಳು (ಕೆಮ್ಮು ಅಥವಾ ಸೀನುವಿಕೆ) ಮತ್ತು ಸೋಂಕಿತ ಜನರೊಂದಿಗೆ ನೇರ ಸಂಪರ್ಕದಿಂದ ಕೋವಿಡ್ -19 ಅನ್ನು ಗಾಳಿ ಅಥವಾ ಮಲ-ಮೌಖಿಕ ಮಾರ್ಗದ ಮೂಲಕ ಹರಡುವುದಿಲ್ಲ ಎಂದು ಆರೋಗ್ಯ ಸಂಸ್ಥೆಯು ದೃಢೀಕರಿಸಿದೆ. ಹರಡುವಿಕೆಯನ್ನು ನಿಯಂತ್ರಿಸಲು ಮುಖಗವಸು, ನೈರ್ಮಲ್ಯ ಮತ್ತು ಸಾಮಾಜಿಕ ಅಂತರಕಾಯ್ದುಕೊಳ್ಳುವುದು ಅವಶ್ಯಕವಾಗಿದೆ.

ಎರಡನೆಯದಾಗಿ, ಪ್ರಸರಣಕ್ಕಾಗಿ ನಿಕಟ ಮತ್ತು ದೀರ್ಘ ಕಾಲದ ಸಂಪರ್ಕದ ಅಗತ್ಯವಿದೆ. ಆದ್ದರಿಂದ ಪ್ರಸರಣದ ಅಪಾಯವು ಜನನಿಬಿಡ ಸಭೆಗಳು, ಸಮಾರಂಭಗಳು, ಜನಭರಿತ ಕಾರ್ಯಕ್ಷೇತ್ರಗಳು ಮತ್ತು ಸಾರ್ವಜನಿಕ ಸಾರಿಗೆಯೊಳಗೆ ಹೆಚ್ಚು, ಸಣ್ಣ ಪ್ರಮಾಣದ ಸಂವಹನದ ಮೂಲಕ ಸೋಂಕಿಗೆ ಒಳಗಾಗುವ ಸಾಧ್ಯತೆಗಳು ಕಡಿಮೆ.

ಮೂರನೆಯದಾಗಿ, ವಿಶೇಷವಾಗಿ ರೋಗಲಕ್ಷಣಗಳು ಮೊದಲ ವಾರದೊಳಗೆ ಹೆಚ್ಚಿನ ಹರಡುವಿಕೆಯು ರೋಗಲಕ್ಷಣವನ್ನು ಹೊಂದಿರುವ ಪ್ರಕರಣದೊಂದಿಗೆ ನಿಕಟ ಸಂಪರ್ಕದಿಂದ ಉಂಟಾಗುತ್ತದೆ. ಲಕ್ಷಣರಹಿತ ಪ್ರಕರಣಗಳಿಂದ ಹರಡುವುದು ತುಲನಾತ್ಮಕವಾಗಿ ಕಡಿಮೆ. ನಾಲ್ಕನೆಯದಾಗಿ, ಕಿರಿಯರಿಗಿಂತ ಹಿರಿಯರು ಸೋಂಕಿಗೆ ತುತ್ತಾಗುತ್ತಾರೆ. ಈ ಸಾಂಕ್ರಾಮಿಕ ರೋಗವು ಮಕ್ಕಳಿಂದ ಹರಡುವಿಕೆಯ ಪಾತ್ರ ಬಲು ಕಡಿಮೆ. ಐದನೆಯದಾಗಿ, ವಯಸ್ಸಾದವರು ಮತ್ತು ಮೊದಲೇ ಕಾಯಿಲೆ ಹೊಂದಿರುವ ಜನರು ಹೆಚ್ಚು ಅಪಾಯದಲ್ಲಿದ್ದರೆ, ಅವರನ್ನು ಮನೆಯಲ್ಲಿಯೇ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಿಗ್ಬಂಧನದಲ್ಲಿಟ್ಟರೆ ಸಾವು ನೋವುಗಳು ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಮತ್ತೊಂದು ಮುಖ್ಯವಾದ ವಿಷಯವೆಂದರೆ ಸಾವಿನ ಪ್ರಮಾಣವು ಮೊದಲೇ ಅಂದಾಜು ಮಾಡಿದ್ದಕ್ಕಿಂತ ತೀರಾ ಕಡಿಮೆಯಾಗಿದೆ. ಶೇ.1ಕ್ಕಿಂತ ಕಡಿಮೆ ಇರುವುದರಿಂದ ಇದು SARS ಮತ್ತು MERS ನಂತಹ ಕಾಯಿಲೆಗಳಿಗೆ ಕಾರಣವಾದ ಇತರ ಕರೋನಾ ವೈರಸ್‌ಗಳಿಂದ ಉಂಟಾಗುವ ಸಾವುಗಳಿಗಿಂತ ತೀರಾ ಕಡಿಮೆ.

ಈ ವಿವರಗಳಿಂದ ತುಲನಾತ್ಮಕವಾಗಿ ಅರಿಯುವು ದೇನೆಂದರೆ, ಕೋವಿಡ್ -19 ನಾವು ಮೊದಲೇ ಯೋಚಿಸಿದಷ್ಟು ಮಾರಣಹೋಮವಾಗುವಂಥ ಮಹಾಮಾರಿ ಯಾಗಿ ರು ವುದಿಲ್ಲ ಅನ್ಯಥಾ ಅರ್ಥೈಸದೇ ಇದು ಭಯಾನಕ ಕಾಯಿಲೆ ಎಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ ಮತ್ತು ನಾವು ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆಗಳನ್ನು ಈ ಸಮಯದಲ್ಲಿ ತೆಗೆದುಕೊಳ್ಳಬೇಕಾಗಿದೆ. ಆದಾಗ್ಯೂ, ಈ ಹೊಸ ಅನುಭವವು ಮತ್ತು ಜ್ಞಾನವು ಆರ್ಥಿಕತೆಯ ಬಾಗಿಲನ್ನು ತೆರೆಯುವ ಸಕಲ ಮಾರ್ಗವನ್ನು ನಮಗೆ ತೋರಿಸುತ್ತಿದೆ. ಮಾರ್ಗವು ಅನುಕೂಲಕರವಾಗಿರಲು ನಮ್ಮ ಆದ್ಯತೆಗಳನ್ನು ಮೊದಲು ಆಯೋಜಿಸಬೇಕಿದೆ ಮತ್ತು ವಾಸ್ತವಿಕರೂಪಕ್ಕೆ ತರಲು ದೇಶದ ನಾಗರಿಕರೆಲ್ಲರು ಕೈ ಜೋಡಿಸಬೇಕಿದೆ.

ಸರಕಾರ ತೆಗೆದುಕೊಂಡಿರುವ ಕೆಂಪು, ಕಿತ್ತಳೆ ಮತ್ತು ಹಸಿರು ನಿಯಂತ್ರಣ ಪ್ರದೇಶಗಳನ್ನು ವರ್ಗೀಕರಿಸಿದನ್ನು ಗಮನಿಸಿದರೆ ಶೂನ್ಯ ಪ್ರಕರಣಗಳನ್ನು ಹೊಂದಲು ಯೋಜಿಸಿದಂತಿದೆ. ಇದೀಗ ಇಟ್ಟಿರುವ ಹೆಜ್ಜೆಯು ದಿಟವೇ ಹಾಗೂ ಸಕಾರಾತ್ಮವಾದುದೇ. ಆದರೆ ಇದು ಕ್ಲಿಷ್ಟವಾದ ನಿರ್ಧಾರವಾಗುತ್ತದೆ. ಏಕೆಂದರೆ, ಹಸಿರು ನಿಯಂತ್ರಣ ಪ್ರದೇಶವು ಸಕಲ ವಹಿವಾಟಿಗೆ ಒಪ್ಪಿಗೆ ಕೊಟ್ಟಾಗ ಕೇವಲ ಒಂದು ಪ್ರಕರಣವುಳ್ಳ ರೋಗಿಯಿಂದ ಇಡೀ ಪ್ರದೇಶ ಅಥವಾ ಮೊಹಲ್ಲಾವನ್ನು ಕೆಂಪು ವಲಯವನ್ನಾಗಿ ಮಾಡುವುದು ಸಮಂಜಸವಾದುದಲ್ಲ. ಈ ರೀತಿಯಿಂದ ಶೂನ್ಯ ಪ್ರಕರಣಗಳು ಹೊಂದಲು ಸಾಧ್ಯವಿಲ್ಲ ಮತ್ತು ಅವಾಸ್ತವಿಕವು ಕೂಡ. ವಾಸ್ತವಿಕವಾಗಿ ಕೊರೊನಾ ಮಹಾಮಾರಿಗೆ ಲಸಿಕೆಯನ್ನು ಹೊಂದಿದಾಗ ಶೂನ್ಯ ಪ್ರಕರಣಗಳನ್ನು ಹೊಂದಬಹುದಾದ್ದರಿಂದ ಲಸಿಕೆಯ ಸಂಶೋಧನೆ ನಡೆಯುತ್ತಲೇ ಇದೆ, ಆದರೆ ಲಸಿಕೆಯು ಕಂಡುಹಿಡಿಯಬಹುದಾಗಿದೆ ಎಂಬುದು ಇನ್ನು ಖಾತರಿಯಾಗದ ವಿಷಯವಷ್ಟೆ.

ಲಾಕ್ ಡೌನ್ ಗುರಿ ರೋಗ ಪ್ರಕರಣಗಳನ್ನು ನಿಯಂತ್ರಿಸುವುದು ಹಾಗೂ ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸಬೇಕಾಗಿರುವುದು. ಲಾಕ್ ಡೌನ್ ಎಂದಿಗೂ ಸೋಂಕನ್ನು ನಿವಾರಿಸುವುದಿಲ್ಲ, ಸೋಂಕುಗಳು ಹರಡುವ ಕಾರ್ಯವು ಮುಂದೂಡುವುದಷ್ಟೆ. ಆದ್ದರಿಂದ, ಶೂನ್ಯ ಸೋಂಕಿನ ಮೇಲೆ ಕೇಂದ್ರೀಕರಿಸುವ ಬದಲು, ನಾವು ಸಾವನ್ನು ಕಡಿಮೆ ಮಾಡುವತ್ತ ಗಮನ ಹರಿಸಬೇಕು. ಸಾವುಗಳನ್ನು ಕಡಿಮೆ ಮಾಡುವ ಗುರಿಯನ್ನು ನಾವು ರಚಿಸಿಕೊಂಡರೆ, ದೇಶದ ಆರ್ಥಿಕತೆಯನ್ನು ಮತ್ತೆ ತೆರೆಯಲು ನಾವು ವ್ಯವಸ್ಥಿತ ಚೌಕಟ್ಟನ್ನು ಅಭಿವೃದ್ಧಿಪಡಿಸಬಹುದಾಗಿದೆ.

ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು, ಸಾವುಗಳನ್ನು ಕಡಿಮೆ ಮಾಡಲು ಮತ್ತು ಆರ್ಥಿಕತೆಯ ಬಾಗಿಲನ್ನು ತೆರೆಯಲು ಈ ಕೆಳಗಿನ ಅಂಶಗಳ ಚೌಕಟ್ಟನ್ನು ಪರಿಶೀಲಿಸಬಹುದಾಗಿದೆ. ಮೊದಲನೆಯದಾಗಿ, ಎಲ್ಲಾ ಗಂಭೀರ ಮತ್ತು ನಿರ್ಣಾಯಕ ಪ್ರಕರಣಗಳಿಗೆ ಚಿಕಿತ್ಸೆ ನೀಡಲು ಆರೋಗ್ಯ ಮೂಲಸೌಕರ್ಯಗಳನ್ನು ಹೊಂದಿದ್ದರೆ ಜಿಲ್ಲೆಗಳು ಮತ್ತು ನಗರಗಳು ಎಂದಿನಂತೆ ವಹಿವಾಟಿಗೆ ಚಾಲನೆ ನೀಡಬಹುದಾಗಿದೆ. ಖಾಸಗಿ ಆರೋಗ್ಯ ಕ್ಷೇತ್ರವು ಕೂಡ ಸಂಪೂರ್ಣವಾಗಿ ಬೆಂಬಲವನ್ನು ನೀಡಬೇಕಾಗುತ್ತದೆ. ಎರಡನೆಯದಾಗಿ, ಅನಾರೋಗ್ಯ ಮತ್ತು ವೃದ್ಧರ ಚಲನೆಗೆ ನಿರ್ಬಂಧಗಳನ್ನು ವಿಧಿಸಿ ಮನೆಯಲ್ಲಿಯೇ ಇರುವಂತೆ ಮಾಡಬೇಕಾಗುತ್ತದೆ.

ನಗರಗಳು ಮತ್ತು ಜಿಲ್ಲೆಗಳನ್ನು ಲಾಕ್ ಮಾಡುವ ಬದಲು, ಮನೆಗಳನ್ನು, ಕಟ್ಟಡಗಳನ್ನು ಮತ್ತು ವಸಾಹತುಗಳನ್ನು ಲಾಕ್ ಮಾಡುವತ್ತ ಗಮನ ಹರಿಸಬೇಕು. ಸಾಂಕ್ರಾಮಿಕ ರೋಗ ಶಾಸ್ತ್ರಜ್ಞರನ್ನು ನೇಮಿಸಿಕೊಂಡು ಸೋಂಕಿನ ಪ್ರಮಾಣವನ್ನು ಪರೀಕ್ಷೆಗಳನ್ನು ನಡೆಸಿಕೊಂಡು ಪ್ರಮಾಣವು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿರುವುದೋ ಎಂಬುದರ ಸಂಶೋಧನೆಯನ್ನು ನಡೆಸುತ್ತಿರಬೇಕು.

ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದನ್ನು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮುಖಗವಸನ್ನು ಕಡ್ಡಾಯಗೊಳಿಸಬೇಕು. ಲಭ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಬಲಗೊಳಿಸಿ ಮತ್ತು ಹೊಸ ಮೂಲಸೌಕರ್ಯಗಳನ್ನು ನಿರ್ಮಿಸುವ ಮೂಲಕ ಆರೋಗ್ಯ ಪರೀಕ್ಷಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ವಿಮಾನಯಾನ, ರೈಲು ನಿಲ್ದಾಣ, ಮುಂತಾದ ಸಾರಿಗೆ ಸಂಸ್ಥೆಗಳ ನಿಲ್ದಾಣಗಳಲ್ಲಿ ಪಾಯಿಂಟ್ ಆಫ್ ಕೇರ್ ಟೆಸ್ಟಿಂಗ್ ಸೌಲಭ್ಯಗಳು ಮತ್ತು ಇತರ ತ್ವರಿತ ಪರೀಕ್ಷೆಗಳನ್ನು ಮಾಡಲು ಸರಕಾರವು ಅನುವುಮಾಡಿಕೊಳ್ಳಬೇಕು. ಈ ಪರೀಕ್ಷೆಗಳು ಆರ್ಥಿಕತೆಯನ್ನು ಪುನಃ ತೆರೆಯುವ ವಿಶ್ವಾಸವನ್ನು ಹಾಗೂ ಬೆಳೆಸುವ ಸಾಮರ್ಥ್ಯವನ್ನು ವೃದ್ಧಿಸುತ್ತದೆ.

ಸೋಂಕಿನ ಸಂಪರ್ಕವನ್ನು ಪತ್ತೆಹಚ್ಚುವಿಕೆಯನ್ನು ಮತ್ತಷ್ಟು ತೀವ್ರಗೊಳಿಸಿ ಪ್ರಕರಣಗಳನ್ನು ತ್ವರಿತವಾಗಿ ಪ್ರತ್ಯೇಕಿಸಬಹುದಾದಂಥ ಕೆಲಸವನ್ನು ಅತೀ ಶೀಘ್ರದಲ್ಲಿ ಮಾಡಬೇಕಿದೆ. ನಿರುದ್ಯೋಗಿಗಳಿಗೆ ಕೂಡ ಈ ಕೆಲಸವು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ಸಹಕಾರಿಯಾಗುತ್ತದೆ. ಸೋಂಕಿನ ಹರಡುವಿಕೆಯನ್ನು ತಡೆಯಲು ರಾಷ್ಟ್ರವ್ಯಾಪಿ ಆವರ್ತನದಲ್ಲಿ ಆರೋಗ್ಯ ಪರೀಕ್ಷೆಗಳನ್ನು ನಡೆಸಿಕೊಂಡು ಬರಬೇಕು. ಕಾರ್ಖಾನೆಗಳು, ಹೋಟೆಲ್‌ಳು, ಅಂಗಡಿಗಳು ಮತ್ತು ಸಾರಿಗೆ ವ್ಯವಸ್ಥೆಗಳನ್ನು ಸಾಮಾಜಿಕ ಅಂತರದಿಂದ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ರಚಿಸಿ ಜನರು ಪಾಲಿಸುವಂತೆ ಮಾಡಬೇಕು.

ಜನರಿಗೆ ಜಾಗೃತಿ ಹೆಚ್ಚಿಸಿ ಮತ್ತು ಈ ರೋಗದ ಸುತ್ತ ಭಯನಿರ್ಮಾಣದ ವಾತಾವರಣವನ್ನು ನಿರ್ಮಿಸದಂತೆ ನೋಡಿಕೊಳ್ಳಬೇಕು . ಲಸಿಕೆ ಮತ್ತು ಔಷಧಿಯನ್ನು ತ್ವರಿತವಾಗಿ ಅಭಿವೃದ್ಧಿಪಡಿಸಲು ರಾಷ್ಟ್ರೀಯ ಸಂಪನ್ಮೂಲಗಳನ್ನು ಕಲೆ ಹಾಕಿ ಮತ್ತು ಅದರ ಮಾಹಿತಿಗಳಿಂದ ಸಿದ್ಧಪಡಿಸಿಕೊಳ್ಳಬೇಕು. ಇತರ ದೇಶಗಳೊಂದಿಗೆ ಕೈ ಜೋಡಿಸಿ ಕೆಲಸ ಮಾಡಿದರೆ ಮತ್ತು ಮೇಲಿನ ಚೌಕಟ್ಟಿನ ಸುತ್ತ ನಾವು ಅನುಷ್ಠಾನ ಯೋಜನೆಯನ್ನು ಅಭಿವೃದ್ಧಿಪಡಿಸಿದರೆ ಕರೋನಾದಿಂದ ಜೀವ ಉಳಿಸುವವರ ನಡುವೆ ಮತ್ತು ನಿರಾಹಾರ, ಇತರ ರೋಗಗಳಿಂದ ನರಳುತ್ತಿರುವ ನಡುವೆ ಸಮತೋಲನವನ್ನು ತರಲು ಸಾಧ್ಯವಾಗುತ್ತದೆ. ಸಾವನ್ನು ಕೂಡ ಗೆಲ್ಲಬಹುದಾಗಿದೆ.